,71

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 465(402) |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | ಡಾ:ತಳವಾರ ಸಾಬಣ್ಣಾ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 12-12-2024 |
| ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೇಂದ್ರ ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷ ಪೂರ್ಣಚಂದ್ರ ಹೋಟಾ ಸಮಿತಿಯು ವರದಿ ಸಲ್ಲಿಸಿ ಎಷ್ಟು ವರ್ಷಗಳಾದವು; | ಪಿ.ಸಿ.ಹೋಟಾ ಸಮಿತಿಯು ದಿನಾಂಕ:20/08/2013 ರಂದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತದೆ. |
| ಆ) | ಕೆಪಿಎಸ್‌ಸಿಯಲ್ಲಿ ದುರಾಡಳಿತ ಮತ್ತು ಅವ್ಯವಸ್ಥೆ ಸುಧಾರಿಸಲು ಸಲ್ಲಿಸಿದ ಹೋಟಾ ಸಮಿತಿಯ ವರದಿಯ ವಿಳಂಬಕ್ಕೆ ಕಾರಣಗಳೇನು; | ಕರ್ನಾಟಕ ಲೋಕಸೇವಾ ಆಯೋಗದ ಸುಧಾರಣೆಗಾಗಿ ಶ್ರೀ ಪಿ.ಸಿ.ಹೋಟಾ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿ ವಿವಿಧ ಶಿಫಾರಸ್ಸುಗಳನ್ನು ಮಾಡಿರುತ್ತದೆ. ಸದರಿ ವರದಿಯಲ್ಲಿನ ಶಿಫಾರಸ್ಸುಗಳನ್ನು ಸರ್ಕಾರವು ಪರಿಶೀಲಿಸಿ ಈ ಸಂಬಂಧ ನಿಯಮಗಳಿಗೆ ತಿದ್ದುಪಡಿಯನ್ನು ತರಲಾಗಿದೆ ಹಾಗೂ ಆದೇಶ/ಅಧಿಸೂಚನೆಗಳನ್ನು ಜಾರಿ ಮಾಡಿರುತ್ತದೆ. |
| ಇ) | ಕೆಪಿಎಸ್‌ಸಿ ಅಧ್ಯಕ್ಷರು/ಸದಸ್ಯರುಗಳ ನೇಮಕಾತಿಯಲ್ಲಿನ ಗೊಂದಲಗಳು, ನೇಮಕಾತಿಯಲ್ಲಿ ಆಗುತ್ತಿರುವ ಸಮಸ್ಯೆಗಳ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸುಧಾರಣೆ ತಂದು ಸಾಂವಿಧಾನಿಕ ಸಂಸ್ಥೆಯ ಆತ್ಮವಿಶ್ವಾಸ ಹೆಚ್ಚಿಸಿ ಉದ್ಯೋಗ ಆಕಾಂಕ್ಷಿಗಳಿಗೆ ಸಹಾಯ ಮಾಡುವಲ್ಲಿ ಸರ್ಕಾರದ ಕಾಳಜಿ ಏನು; | ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರುಗಳ ನೇಮಕಾತಿಯಲ್ಲಿ ಯಾವುದೇ ಗೊಂದಲಗಳಿರುವುದಿಲ್ಲ.<br><br>ಮುಂದುವರೆದು, ಆಯೋಗವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸುಧಾರಣೆಗಳನ್ನು ತರಲು ಪರೀಕ್ಷಾ ಕೇಂದ್ರಗಳಿಗೆ ಮೊಬೈಲ್ ಜಾಮರ್ಸ್‌ಗಳನ್ನು ಅಳವಡಿಸುತ್ತಿರುವುದಲ್ಲದೇ, ಪ್ರತಿ ಪರೀಕ್ಷಾ |

| | | |
|---|---|---|
| | | ಕೊಠಡಿಗೆ ಸಿ.ಸಿ.ಟಿ.ವಿಗಳನ್ನು ಅಳವಡಿಸಿಕೊಳ್ಳಲಾಗುತ್ತಿದೆ. ಹಾಗೂ ಹೆಚ್.ಹೆಚ್.ಎಂ.ಡಿ ಮೂಲಕ ಅಭ್ಯರ್ಥಿಗಳ ಫ್ರಿಸ್ಕಿಂಗ್ ಕಾರ್ಯವನ್ನೂ ನೆರವೇರಿಸಲಾಗುತ್ತಿದೆ. ಅಭ್ಯರ್ಥಿಗಳ Impersonation ಅನ್ನು ತಡೆಯಲು ಫೇಸ್ ರೆಕಗ್ನಿಷನ್ ಸಾಫ್ಟ್‌ವೇರ್ ಮೂಲಕ ಅಭ್ಯರ್ಥಿಗಳ ನೈಜತೆಯನ್ನು ಪರಿಶೀಲಿಸಲಾಗುತ್ತಿದೆ. |
| ಈ) | ಹಲವಾರು ಹಗರಣಗಳಿಂದ ಕೂಡಿರುವ ಕೆಪಿಎಸ್‌ಸಿಯಲ್ಲಿ ಸುಧಾರಣೆ ತರಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಿದೆ? | ಕರ್ನಾಟಕ ಲೋಕಸೇವಾ ಆಯೋಗವು ನಡೆಸುವ ನೇಮಕಾತಿ ಪ್ರಕ್ರಿಯೆಗಳನ್ನು ಪರಿಣಾಮಕಾರಿಯಾಗಿ ನಡೆಸಲು ಸರ್ಕಾರದಲ್ಲಿ ಹಲವಾರು ಸಭೆಗಳನ್ನು ನಡೆಸಿ ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ಜಾಗರೂಕತೆಯಿಂದ ಮತ್ತು ದಕ್ಷತೆಯಿಂದ ನಡೆಸಲು ಕಟ್ಟುನಿಟ್ಟಿನ ಸೂಚನೆಗಳನ್ನು ಕಾಲಕಾಲಕ್ಕೆ ನೀಡಲಾಗುತ್ತಿದೆ. |

**ಸಂಖ್ಯೆ.ಸಿಆಸುಇ 234 ಎಸ್‌ಎಲ್‌ಎ 2024**

(ಸಿದ್ದರಾಮಯ್ಯ)
ಮುಖ್ಯಮಂತ್ರಿ